## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **209 (1640)**

ಸದಸ್ಯರ ಹೆಸರು : ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ).

ಉತ್ತರಿಸುವ ದಿನಾಂಕ : **11-03-2022**

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

| ಕ್ರ. ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ) | ಕೊಡಗು ಜಿಲ್ಲೆಯ ಐದು ತಾಲ್ಲೂಕುಗಳಿಗೆ ತಾಲ್ಲೂಕು ಪಂಚಾಯಿತಿ ಕಛೇರಿ ಇವೆಯೇ? (ವಿವರ ನೀಡುವುದು) | ಕೊಡಗು ಜಿಲ್ಲೆಯ ಮಡಿಕೇರಿ, ಸೋಮವಾರಪೇಟೆ ಹಾಗೂ ಪೊನ್ನಂಪೇಟೆಯಲ್ಲಿ ತಾಲ್ಲೂಕು ಪಂಚಾಯತಿ ಕಛೇರಿಗಳಿರುತ್ತವೆ.<br><br>ಮಡಿಕೇರಿ ತಾಲ್ಲೂಕು ಪಂಚಾಯತಿ ಕಛೇರಿ ಕಟ್ಟಡವು ಹಳೆಯ ಕಟ್ಟಡವಾಗಿದ್ದು, ಮಳೆ ಹಾನಿಯಿಂದಾಗಿ ದುರಸ್ಥಿಯಾಗಿರುವುದರಿಂದ ಸಂಪೂರ್ಣ ಕಟ್ಟಡವನ್ನು ನೆಲಸಮಗೊಳಿಸಿ ಕಟ್ಟಡದ ಉನ್ನತೀಕರಣ ಕಾಮಗಾರಿ ಪ್ರಗತಿಯಲ್ಲಿರುವುದರಿಂದ, ಪ್ರಸ್ತುತ ಮಡಿಕೇರಿ ತಾಲ್ಲೂಕು ಪಂಚಾಯತಿಯು ಸಾಮರ್ಥ್ಯಸೌಧದಲ್ಲಿ ಕಾರ್ಯನಿರ್ವಹಿಸುತ್ತಿದೆ.<br><br>ಸೋಮವಾರಪೇಟೆ ತಾಲ್ಲೂಕು ಪಂಚಾಯತಿ ಕಟ್ಟಡವು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.<br><br>ಹಿಂದಿನ ವಿರಾಜಪೇಟೆ ತಾಲ್ಲೂಕು ಪಂಚಾಯತಿ ಕಛೇರಿಯು ಪ್ರಸ್ತುತ ಪೊನ್ನಂಪೇಟೆಯಲ್ಲಿರುವುದರಿಂದ ಸದರಿ ಕಟ್ಟಡವನ್ನು ಪೊನ್ನಂಪೇಟೆ ತಾಲ್ಲೂಕು ಪಂಚಾಯತಿಯನ್ನಾಗಿ ಪರಿವರ್ತಿಸಿ ಕಾರ್ಯನಿರ್ವಹಿಸಲಾಗುತ್ತಿದೆ.<br><br>ಕುಶಾಲನಗರ ಮತ್ತು ವಿರಾಜಪೇಟೆ ತಾಲ್ಲೂಕುಗಳಿಗೆ ತಾಲ್ಲೂಕು ಪಂಚಾಯತಿ ಕಛೇರಿಗಳಿರುವುದಿಲ್ಲ. ಆದರೆ, ಕುಶಾಲನಗರ ತಾಲ್ಲೂಕು ಪಂಚಾಯತಿಯು ಮೂಲ ತಾಲ್ಲೂಕು ಪಂಚಾಯತಿಯಾದ ಸೋಮವಾರಪೇಟೆ ತಾಲ್ಲೂಕು ಪಂಚಾಯತಿಯಲ್ಲಿ ಹಾಗೂ ವಿರಾಜಪೇಟೆ ತಾಲ್ಲೂಕು ಪಂಚಾಯತಿಯು ಪೊನ್ನಂಪೇಟೆ ತಾಲ್ಲೂಕು ಪಂಚಾಯತಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ. |
| ಆ) | ಇಲ್ಲದಿದ್ದಲ್ಲಿ, ಹೊಸದಾಗಿ ಪ್ರಾರಂಭಿಸಲು ಸರ್ಕಾರ ಕೈಗೊಂಡ ಕ್ರಮವೇನು; (ವಿವರ ನೀಡುವುದು) | ಹೊಸದಾಗಿ ರಚಿಸಲಾಗಿರುವ ತಾಲ್ಲೂಕು ಪಂಚಾಯತಿಗಳನ್ನು ಕಾರ್ಯಚರಣೆಗೊಳಿಸುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 215 ಜಿಪಸ 2018(ಪಿ-3), ದಿನಾಂಕ: 01-01-2020ನ್ನು ಹೊರಡಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಆದರಂತೆ, ಸದರಿ ತಾಲ್ಲೂಕು ಪಂಚಾಯತಿಗಳು ಸ್ವಾಯತ್ತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಅಗತ್ಯಕ್ರಮ ಕೈಗೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.<br><br>ಮುಂದುವರೆದು, ದಿನಾಂಕ:12-10-2021ರ ಸರ್ಕಾರದ ಪತ್ರದನ್ವಯ ಹೊಸದಾಗಿ ರಚನೆಯಾಗಿರುವ ತಾಲ್ಲೂಕು ಪಂಚಾಯತಿಗಳು ಕಾರ್ಯನಿರ್ವಹಿಸುತ್ತಿರುವ ಸ್ಥಳ, ಕಟ್ಟಡಕ್ಕೆ ಮಂಜೂರಾಗಿರುವ ಜಮೀನು/ನಿವೇಶನದ ಸಂಪೂರ್ಣ ಮಾಹಿತಿಯನ್ನು ಕ್ರೋಢೀಕರಿಸಿ ಸರ್ಕಾರಕ್ಕೆ ಒದಗಿಸುವಂತೆ ಸೂಚಿಸಲಾಗಿರುತ್ತದೆ. ಕೊಡಗು ಜಿಲ್ಲಾ ಪಂಚಾಯತಿಯಿಂದ ಮಾಹಿತಿಯನ್ನು ನಿರೀಕ್ಷಿಸಲಾಗುತ್ತಿದೆ. |

ಇ) ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ಕ್ಷೇತ್ರಗಳಲ್ಲಿರುವ ಒಟ್ಟು ಗ್ರಾಮ ಪಂಚಾಯಿತಿಗಳ ಸಂಖ್ಯೆ ಎಷ್ಟು; ಅವುಗಳಿಗೆಲ್ಲ ಸ್ವಂತ ಕಟ್ಟಡ ಇವೆಯೇ; ಸ್ವಂತ ಕಟ್ಟಡ ಮತ್ತು ಬಾಡಿಗೆ ಕಟ್ಟಡಗಳ ಸಂಖ್ಯೆ ಎಷ್ಟು; (ತಾಲ್ಲೂಕುವಾರು ವಿವರ ನೀಡುವುದು)

ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ಕ್ಷೇತ್ರಗಳಲ್ಲಿರುವ ಗ್ರಾಮ ಪಂಚಾಯತಿಗಳ ಮತ್ತು ಸ್ವಂತ ಕಟ್ಟಡಗಳ ಹಾಗೂ ಬಾಡಿಗೆ ಕಟ್ಟಡಗಳ ವಿವರಗಳು ಈ ಕೆಳಕಂಡಂತಿವೆ.

| ಕ್ರ.ಸಂ | ತಾಲ್ಲೂಕು | ಗ್ರಾ.ಪಂಗಳ ಸಂಖ್ಯೆ | ಸ್ವಂತ ಕಟ್ಟಡ ಹೊಂದಿರುವ ಗ್ರಾ.ಪಂ. | ಸ್ವಂತ ಕಟ್ಟಡ ಹೊಂದಿರದ ಗ್ರಾ.ಪಂ. | ಪ್ರಸ್ತುತ ವಿವರ |
|---|---|---|---|---|---|
| 1 | ಮಡಿಕೇರಿ | 26 | 23 | 3 | 1) ಅಯ್ಯಂಗಾರಿ-ಸಮುದಾಯ ಭವನ<br>2)ಮೇಕೇರಿ-ಸರ್ಕಾರಿ ಶಾಲೆ<br>3)ಹೊಸ್ಕೇರಿ-ಸಮುದಾಯ ಭವನ |
| 2 | ಸೋಮವಾರಪೇಟೆ | 23 | 23 | 0 | - |
| 3 | ಕುಶಾಲನಗರ | 17 | 17 | 0 | - |
| 4 | ವಿರಾಜಪೇಟೆ | 17 | 17 | 0 | - |
| 5 | ಪೊನ್ನಂಪೇಟೆ | 21 | 20 | 1 | ಕೆ.ಬಡಗ-ಬಾಡಿಗೆ ಕಟ್ಟಡ |
| ಒಟ್ಟು | | 104 | 100 | 4 | |

ಈ) ಸ್ವಂತ ಕಟ್ಟಡಗಳು ಇಲ್ಲದಿದ್ದಲ್ಲಿ, ಹೊಸದಾಗಿ ಕಟ್ಟಡ ಕಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು; (ತಾಲ್ಲೂಕು ವಿವರ ನೀಡುವುದು)

ಸ್ವಂತ ಕಟ್ಟಡಗಳನ್ನು ಹೊಂದಿಲ್ಲದ ಕೊಡಗು ಜಿಲ್ಲಾ ಪಂಚಾಯತಿಯಿಂದ ಇಲ್ಲಿಯವರೆಗೂ ಪ್ರಸ್ತಾವನೆ ಸರ್ಕಾರದಲ್ಲಿ ಸ್ವೀಕೃತಗೊಂಡಿರುವುದಿಲ್ಲ.

ಉ) ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ಮತಕ್ಷೇತ್ರಕ್ಕೆ 2021-22ನೇ ಸಾಲಿನಲ್ಲಿ ಆರ್.ಡಿ.ಪಿ.ಆರ್ ಇಲಾಖೆಯಿಂದ ಯಾವ ಯಾವ ಲೆಕ್ಕ ಶೀರ್ಷಿಕೆಯಡಿಯಲ್ಲಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ತಾಲ್ಲೂಕುವಾರು ವಿವರ ನೀಡುವುದು)

ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ಮತಕ್ಷೇತ್ರಕ್ಕೆ 2021-22ನೇ ಸಾಲಿನಲ್ಲಿ ಆರ್.ಡಿ.ಪಿ.ಆರ್ ಇಲಾಖೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಕ್ಕೆ ಲಿಂಕ್ ಡಾಕ್ಯೂಮೆಂಟ್ ವಿವಿಧ ಲೆಕ್ಕಶೀರ್ಷಿಕೆಗಳಡಿ ಬಿಡುಗಡೆಗೊಳಿಸಿದ ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

| ಕ್ರ.ಸಂ | ಲೆಕ್ಕ ಶಿರ್ಷಿಕೆ | ಹಂಚಿಕೆ | ಕ್ಷೇತ್ರವಾರು ಬಿಡುಗಡೆಗೊಳಿಸಿರುವ ಅನುದಾನ | |
|---|---|---|---|---|
| | | | ಮಡಿಕೇರಿ ಕ್ಷೇತ್ರ | ವಿರಾಜಪೇಟೆ ಕ್ಷೇತ್ರ |
| 1 | 2059 ಕಟ್ಟಡ | 84.53 | 43.11 | 41.42 |
| 2 | 2702- ಕೆರೆ | 100.93 | 51.47 | 49.46 |
| 3 | 2515- ಜಿ.ಪಂ ಕಟ್ಟಡ | 100.00 | 51.00 | 49.00 |
| 4 | 3054- ಸಿ.ಎಂ.ಜಿ.ಎಸ್ ವೈ | 478.33 | 243.95 | 234.38 |
| 5 | 2515-ಶಾಸನಬದ್ಧ | 488.23 | 151.75 | 145.80 |

<table>
<tr>
<td>ಌ)</td>
<td>ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ಮತಕ್ಷೇತ್ರಕ್ಕೆ 2021-22ನೇ ಸಾಲಿನಲ್ಲಿ ಆರ್.ಡಿ.ಪಿ.ಆರ್ ಇಲಾಖೆಯಿಂದ ನಬಾರ್ಡ್ ಕಾಮಗಾರಿಯಲ್ಲಿ ಎರಡು ಕ್ಷೇತ್ರಕ್ಕೆ ಎಷ್ಟು ಕಾಮಗಾರಿಗಳು ಹಂಚಿಕೆಯಾಗಿವೆ ಮತ್ತು ಎಷ್ಟು ಅನುದಾನ ಬಿಡುಗಡೆಯಾಗಿದೆ (ತಾಲ್ಲೂಕುವಾರು ವಿವರ ನೀಡುವುದು)</td>
<td>ಸದರಿ ಮತಕ್ಷೇತ್ರಗಳಿಗೆ 2021-22ನೇ ಸಾಲಿಗೆ ನಬಾರ್ಡ್ ಕಾಮಗಾರಿ ಹಾಗೂ ಅನುದಾನ ಹಂಚಿಕೆಯಾಗಿರುವುದಿಲ್ಲ</td>
</tr>
<tr>
<td>ೠ)</td>
<td>ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ಮತಕ್ಷೇತ್ರಕ್ಕೆ 2020-21 ಹಾಗೂ 2021-22 ನೇ ಸಾಲಿನಲ್ಲಿ ಆರ್.ಡಿ.ಪಿ.ಆರ್ ಇಲಾಖೆಯಿಂದ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಎಷ್ಟು ಅನುದಾನ ಬಿಡುಗಡೆಯಾಗಿದೆ (ತಾಲ್ಲೂಕುವಾರು ವಿವರ ನೀಡುವುದು)</td>
<td>ಕೊಡಗು ಜಿಲ್ಲೆಯ ಮಡಿಕೇರಿ ಮತ್ತು ವಿರಾಜಪೇಟೆ ಮತಕ್ಷೇತ್ರಕ್ಕೆ 2020-21 ಹಾಗೂ 2021-22 ನೇ ಸಾಲಿನಲ್ಲಿ ಆರ್.ಡಿ.ಪಿ.ಆರ್ ಇಲಾಖೆಯ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಿಂದ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.
<table>
<tr><th rowspan="2">ಕ್ರ.ಸಂ</th><th rowspan="2">ಮತ ಕ್ಷೇತ್ರ</th><th colspan="2">ಹಂಚಿಕೆಯಾದ ಅನುದಾನದ ವಿವರ (ರೂ. ಕೋಟಿಗಳಲ್ಲಿ)</th><th rowspan="2">ಷರಾ</th></tr>
<tr><th>2020-21</th><th>2021-22</th></tr>
<tr><td>1</td><td>ಮಡಿಕೇರಿ</td><td>64.27</td><td>91.70</td><td rowspan="3">ಐದು ತಾಲ್ಲೂಕುಗಳಲ್ಲಿ ಎರಡು ಹೊಸ ತಾಲ್ಲೂಕುಗಳನ್ನು IMIS ತಂತ್ರಾಂಶದಲ್ಲಿ ಸೇರ್ಪಡೆಗೆ ಪ್ರಕ್ರಿಯೆ ಚಾಲ್ತಿಯಲ್ಲಿರುವುದರಿಂದ ಹಳೆ ತಾಲ್ಲೂಕಿನಲ್ಲಿಯೇ ಪರಿಗಣಿಸಲಾಗಿದೆ</td></tr>
<tr><td>2</td><td>ವಿರಾಜಪೇಟೆ</td><td>46.73</td><td>105.08</td></tr>
<tr><td colspan="2">ಒಟ್ಟು</td><td>111.00</td><td>196.78</td></tr>
</table>
</td>
</tr>
<tr>
<td>ಎ)</td>
<td>ಎಷ್ಟು ಗ್ರಾಮಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ (ವಿವರ ನೀಡುವುದು)</td>
<td>104 ಗ್ರಾಮ ಪಂಚಾಯಿತಿಗಳನ್ನೊಳಗೊಂಡಂತೆ ಜೆ.ಜೆ.ಎಂ. ಯೋಜನೆಯಡಿಯಲ್ಲಿ ಬ್ಯಾಚ್-1 ರಲ್ಲಿ 188 ಜನ ವಸತಿ ಪ್ರದೇಶ, ಬ್ಯಾಚ್-2 ರಲ್ಲಿ 135 ಜನ ವಸತಿ ಪ್ರದೇಶ ಹಾಗೂ ಬ್ಯಾಚ್-3 ರಲ್ಲಿ 138 ಜನ ವಸತಿ ಪ್ರದೇಶಗಳಿಗೆ ಎಲ್ಲಾ ಗ್ರಾಮೀಣ ಮನೆಗಳಿಗೆ ಕುಡಿಯುವ ನೀರಿನ ಸಂಪರ್ಕವನ್ನು ನೀಡಲು ಡಿ.ಪಿ.ಆರ್ ತಯಾರಿಸಿ ಒದಗಿಸಲು ಕ್ರಮವಹಿಸಲಾಗುತ್ತಿದೆ. ಕೊಡಗು ಜಿಲ್ಲೆಯಲ್ಲಿ ಒಟ್ಟು 1,37,793 ಗ್ರಾಮೀಣ ಮನೆಗಳಿದ್ದು, ಈವರೆಗೂ 78,488 ಮನೆಗಳಿಗೆ ನೀರಿನ ಸಂಪರ್ಕ ಒದಗಿಸಲಾಗಿದ್ದು, ಉಳಿದ ಮನೆಗಳಿಗೆ ಬ್ಯಾಚ್-3ರಲ್ಲಿ ನೀರು ಸಂಪರ್ಕ ಒದಗಿಸಲು ಕ್ರಮ ವಹಿಸಲಾಗುತ್ತಿದೆ. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ.
<table>
<tr><th>ಕ್ರ.ಸಂ</th><th>ತಾಲ್ಲೂಕು</th><th>ಒಟ್ಟು ಗ್ರಾಮೀಣ ಮನೆಗಳ ಸಂಖ್ಯೆ</th><th>ನಳ ನೀರು ಸಂಪರ್ಕ ಒದಗಿಸಿರುವ ಮನೆಗಳ ಸಂಖ್ಯೆ</th><th>ಬಾಕಿ</th></tr>
<tr><td>1</td><td>ಮಡಿಕೇರಿ</td><td>32100</td><td>20541</td><td>11559</td></tr>
<tr><td>2</td><td>ಸೋಮವಾರಪೇಟೆ</td><td>56860</td><td>36396</td><td>20464</td></tr>
<tr><td>3</td><td>ವಿರಾಜಪೇಟೆ</td><td>48833</td><td>21551</td><td>27282</td></tr>
<tr><td colspan="2">ಒಟ್ಟು</td><td>1,37,793</td><td>78,488</td><td>59,305</td></tr>
</table>
</td>
</tr>
</table>

| | | |
|---|---|---|
| ಏ) | ಕಲ್ಪಿಸದಿದ್ದಲ್ಲಿ ಆ ಕಾಮಗಾರಿಗಳನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು (ವಿವರ ನೀಡುವುದು) | ಬಾಕಿ ಇರುವ 59305 ಮನೆಗಳಿಗೆ ಬ್ಯಾಚ್-2 ಮತ್ತು 3 ರಲ್ಲಿ ನಳ ನೀರು ಸಂಪರ್ಕ ಒದಗಿಸಲು ಕ್ರಮವಹಿಸಲಾಗುತ್ತಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಸದರಿ ಕಾಮಗಾರಿಗಳನ್ನು ಮಾರ್ಚ್-2023 ರೊಳಗೆ ಗುರಿ ಸಾಧಿಸಲು ಯೋಜನೆಯನ್ನು ರೂಪಿಸಲಾಗಿದೆ. |

ಸಂಖ್ಯೆ: ಗ್ರಾಅಪಂರಾ 120 ಜಿಪಸ 2022

(ಕೆ.ಎಸ್.ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಸಂಖ್ಯೆ: ಗ್ರಾಅಪ 215 ಜಿಪಸ 2018(ಪಿ–3)

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು,ದಿನಾಂಕ:01–01–2020

## ಸುತ್ತೋಲೆ

ವಿಷಯ: ಹೊಸದಾಗಿ ರಚಿಸಲಾಗಿರುವ ತಾಲ್ಲೂಕು ಪಂಚಾಯತಿಗಳನ್ನು ಕಾರ್ಯಾಚರಣೆಗೊಳಿಸುವ ಕುರಿತು.

ಉಲ್ಲೇಖ: ಸರ್ಕಾರದ ಅಧಿಸೂಚನೆ ಸಂಖ್ಯೆ:ಗ್ರಾಅಪ 215 ಜಿಪಸ 2018 (1 ರಿಂದ 50), ದಿನಾಂಕ:14–10–2019.

*****

ಉಲ್ಲೇಖಿತ ಸರ್ಕಾರದ ಅಧಿಸೂಚನೆಯಲ್ಲಿ ಸರ್ಕಾರವು 50 ಹೊಸ ತಾಲ್ಲೂಕು ಪಂಚಾಯತಿಗಳನ್ನು ವಿವಿಧ ಜಿಲ್ಲೆಗಳಲ್ಲಿ ರಚಿಸಿ, ಅಧಿಸೂಚನೆ ಹೊರಡಿಸಿರುತ್ತದೆ. ದಿನಾಂಕ:31-12–2019ರಂದು ಸಂಬಂಧಪಟ್ಟ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಸಭೆಯನ್ನು ನಡೆಸಿ, ಸದರಿ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಹಣೆಯ ಬಗ್ಗೆ ಪರಿಶೀಲನೆ ನಡೆಸಲಾಯಿತು. ಈ ತಾಲ್ಲೂಕು ಪಂಚಾಯತಿಗಳು ಇದುವರೆವಿಗೂ ಕಾರ್ಯನಿರ್ವಹಿಸದೇ ಇರುವುದು ವಿಷಾದನೀಯ ಸಂಗತಿಯಾಗಿದೆ. ಈ ಬಗ್ಗೆ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ವೈಯಕ್ತಿಕ ಗಮನವನ್ನು ಹರಿಸಿ, ತಾಲ್ಲೂಕು ಪಂಚಾಯತಿಗಳು ಸ್ವಾಯತ್ತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಅಗತ್ಯಕ್ರಮ ಕೈಗೊಳ್ಳಲು ಸೂಚಿಸಿದೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಈ ಸಂಸ್ಥೆಗಳು ಚಾಲ್ತಿಗೆ ಬರುವಂತೆ ಮಾಡಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

1. ಹೊಸದಾಗಿ ರಚನೆಗೊಂಡ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಯ ಹುದ್ದೆಗೆ ಸಮಾನಾಂತರ ಹುದ್ದೆಗಳನ್ನು ಹೊಂದಿರುವಂತಹ ಅಧಿಕಾರಿಯನ್ನು ಹೆಚ್ಚುವರಿ ಪ್ರಭಾರದಲ್ಲಿ ಇಡತಕ್ಕದ್ದು.
2. ಉಳಿದಂತೆ ಸಹಾಯಕ ನಿರ್ದೇಶಕರು ಮತ್ತು ಇತರೆ ಅನುಮೋದಿತ ಸಿಬ್ಬಂದಿಗಳ ಹುದ್ದೆಗಳಿಗೆ ಮೂಲ ತಾಲ್ಲೂಕು ಪಂಚಾಯತಿಯಲ್ಲಿರುವಂತಹ ಅಧಿಕಾರಿ/ಸಿಬ್ಬಂದಿಗಳನ್ನು ಅಥವಾ ಹೊಸದಾಗಿ ರಚನೆಗೊಂಡಿರುವಂತಹ ತಾಲ್ಲೂಕು ಪಂಚಾಯತಿಯ ಕೇಂದ್ರ ಸ್ಥಾನದಲ್ಲಿ ಇರುವಂತಹ ಜಿಲ್ಲಾ ಪಂಚಾಯತಿಯ ಅಧೀನ ಕಛೇರಿಯ ಸಮಾನಾಂತರ ಅಧಿಕಾರಿ/ಸಿಬ್ಬಂದಿಗಳನ್ನು ಹೆಚ್ಚುವರಿ ಪ್ರಭಾರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ನೇಮಿಸಿ ಆದೇಶ ಹೊರಡಿಸತಕ್ಕದ್ದು.
3. ಹೊಸ ತಾಲ್ಲೂಕು ಪಂಚಾಯತಿ ಕೇಂದ್ರ ಸ್ಥಾನವು ಒಂದು ವೇಳೆ ಗ್ರಾಮ ಪಂಚಾಯತಿಯಾಗಿದ್ದರೆ, ಆ ಕೇಂದ್ರ ಸ್ಥಾನದ ಗ್ರಾಮ ಪಂಚಾಯತಿ ಕಟ್ಟಡದಲ್ಲಿ ಕೂಡಲೇ ತಾಲ್ಲೂಕು ಪಂಚಾಯತಿಯ ಕಛೇರಿಯನ್ನು ತೆರೆಯತಕ್ಕದ್ದು. ಒಂದು ವೇಳೆ ಪಟ್ಟಣ ಪ್ರದೇಶವಾಗಿದ್ದರೆ ಮೊದಲನೆಯ ಆದ್ಯತೆಯಾಗಿ ಇತರೆ ಸರ್ಕಾರಿ ಕಛೇರಿಗಳಲ್ಲಿ ಸ್ಥಳ ಲಭ್ಯವಿದ್ದರೆ ಅಂತಹ ಕಛೇರಿಗಳನ್ನು ಗುರುತಿಸುವುದು. ಇಲ್ಲದಿದ್ದರೆ ಸೌಲಭ್ಯಗಳನ್ನು ಹೊಂದಿರುವಂತಹ ಬಾಡಿಗೆ ಕಟ್ಟಡವನ್ನು ಗುರುತಿಸಿ, ತಾಲ್ಲೂಕು ಪಂಚಾಯತಿ ಕಛೇರಿಯನ್ನು ತೆರೆಯತಕ್ಕದ್ದು.
4. ಹೊಸದಾಗಿ ತಾಲ್ಲೂಕು ಪಂಚಾಯತಿ ಕಟ್ಟಡವನ್ನು ನಿರ್ಮಿಸಲು ಅಗತ್ಯವಾದಂತಹ ವಿಸ್ತೀರ್ಣದ ನಿವೇಶನವನ್ನು ಗುರುತಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಲು ತಿಳಿಸಿದೆ.
5. ತಾತ್ಕಾಲಿಕವಾಗಿ ಕಛೇರಿ ತೆರೆಯಲು ಗುರುತಿಸಿರುವ ಸರ್ಕಾರಿ ಕಟ್ಟಡಗಳಿಗೆ ದುರಸ್ತಿ ಅಥವಾ ವಿಸ್ತೀರ್ಣಕ್ಕೆ ಮತ್ತು ಕಛೇರಿಗೆ ಅಗತ್ಯವಾದಂತಹ ಪೀಠೋಪಕರಣಗಳಿಗೆ ಬೇಕಾಗುವಂತಹ ಅನುದಾನದ ಸವಿಸ್ತಾರವಾದ ವಿವರಣೆಯೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವುದು.
6. ಉಲ್ಲೇಖದ ಅಧಿಸೂಚನೆಯಲ್ಲಿ, ಮೂಲ ತಾಲ್ಲೂಕು ಪಂಚಾಯತಿಯಲ್ಲಿ ಉಳಿದಿರುವಂತಹ ಆವರ್ತಕ ಮತ್ತು ಅನಾವರ್ತಕ ಅನುದಾನವನ್ನು ಹೊಸ ತಾಲ್ಲೂಕು ಪಂಚಾಯತಿ ಮತ್ತು ಹಳೆ

ತಾಲ್ಲೂಕು ಪಂಚಾಯತಿಗಳ ನಡುವೆ ವಿಭಜಿಸಿ ನೀಡಲು ಈಗಾಗಲೇ ಸೂಚನೆ ನೀಡಲಾಗಿದೆ. ಆದರೂ, ಇದುವರೆವಿಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಅನುದಾನವನ್ನು ವಿಭಜಿಸಿ ನೀಡಿರುವುದಿಲ್ಲ. ಆದ್ದರಿಂದ ಕೂಡಲೇ ಕ್ರಮ ಕೈಗೊಳ್ಳಲು ತಿಳಿಸಿದೆ.

7. ಹೊಸ ತಾಲ್ಲೂಕು ಪಂಚಾಯತಿಗಳಿಗೆ ನೇಮಿಸಿದ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಹಣ ಸೆಳೆಯುವ ಮತ್ತು ವಿತರಿಸುವ ಅಧಿಕಾರಿಯಾಗಿ (DDO Code) ಪಡೆಯಬೇಕಾಗುತ್ತದೆ. ಇವಕ್ಕಾಗಿ ಮುಖ್ಯ ಲೆಕ್ಕಾಧಿಕಾರಿಗಳು ಖಜಾನೆಗೆ ಸಂಬಂಧಿಸಿದ ಲೆಕ್ಕ ಶೀರ್ಷಿಕೆಗಳಿಂದ ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಅಧಿಕಾರಿಯನ್ನಾಗಿ ನೇಮಿಸಿ, ಆದೇಶ ಹೊರಡಿಸಬೇಕಾಗುತ್ತದೆ.

8. ಸಂಬಂಧಿಸಿದ ಕಾರ್ಯನಿರ್ವಾಹಕ ಅಧಿಕಾರಿಗಳು HRMSನಲ್ಲಿ ನೊಂದಾವಣೆ ಮಾಡಿಕೊಳ್ಳಬೇಕಾಗುತ್ತದೆ ಮತ್ತು ಪಂಚತಂತ್ರದಲ್ಲಿ Login ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ ಸಲ್ಲಿಸಲು ತಿಳಿಸಿದೆ.

9. ಕಾರ್ಯನಿರ್ವಾಹಕ ಅಧಿಕಾರಿಗಳು ಸಂಬಳ ಪಾವತಿಸುವ ಅಧಿಕಾರಿಯಾಗಿರುವುದರಿಂದ NPS ನೊಂದಣಿಯನ್ನು ಮಾಡಿಕೊಳ್ಳುವುದು. ಹಾಗೆಯೇ ತಾಲ್ಲೂಕು ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಕಾಯ್ದೆಯಡಿಯಲ್ಲಿ ತಾಲ್ಲೂಕು ಸಮನ್ವಯಾಧಿಕಾರಿಯಾಗಿ ಕಾರ್ಯನಿರ್ವಹಿಸುವುದರಿಂದ ಅದಕ್ಕೆ ಅಗತ್ಯವಾದಂತಹ Login ಮತ್ತು Password ಗಳನ್ನು ಗ್ರಾಮೀಣಾಭಿವೃದ್ಧಿ ಆಯುಕ್ತರ ಕಛೇರಿಯಿಂದ ಪಡೆಯುವುದು.

10. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 302(ಎ)ನ್ನು ಪ್ರಕರಣ 133ರ ಜೊತೆ ಓದಿಕೊಂಡಂತೆ ಹೊಸ ಹಾಗೂ ಹಳೆಯ ತಾಲ್ಲೂಕು ಪಂಚಾಯತಿಗಳ ನಡುವೆ ಸದಸ್ಯರನ್ನು ವಿಭಜಿಸಿ ಅಧಿಸೂಚನೆ ಹೊರಡಿಸಲು ಪ್ರಾದೇಶಿಕ ಆಯುಕ್ತರ ಕಛೇರಿಯ ಜೊತೆ ಸಮನ್ವಯತೆಯನ್ನು ಸಾಧಿಸಿ ಕೂಡಲೇ ಅಧಿಸೂಚನೆ ಹೊರಡಿಸಲು ಕ್ರಮವಹಿಸುವುದು.

11. ಒಂದು ವೇಳೆ ಹಳೆಯ ತಾಲ್ಲೂಕು ಪಂಚಾಯತಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಅಧ್ಯಕ್ಷರು/ಉಪಾಧ್ಯಕ್ಷರ ಕ್ಷೇತ್ರಗಳು ಹೊಸ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟರೆ, ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಅವರ ಸ್ಥಾನವು ತೆರವುಗೊಳ್ಳುತ್ತದೆ.

12. 2020-21ನೇ ಸಾಲಿನ ಆಯವ್ಯಯದಲ್ಲಿ ಹೊಸ ತಾಲ್ಲೂಕು ಪಂಚಾಯತಿಯ ಅಧಿಕಾರಿಗಳ/ಸಿಬ್ಬಂದಿಗಳ ಮತ್ತು ಇತರ ವೆಚ್ಚಗಳಿಗೆ ಆಯವ್ಯಯವನ್ನು ಯೋಜನಾ ಇಲಾಖೆಯ ಜೊತೆ ಚರ್ಚಿಸಿ, ಲಿಂಕ್‌ಡಾಕ್ಯುಮೆಂಟ್‌ನಲ್ಲಿ ಸೇರುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಕ್ರಮ ವಹಿಸುವುದು.

13. ಹೊಸದಾಗಿ ರಚನೆಯಾಗಿರುವ ತಾಲ್ಲೂಕು ಪಂಚಾಯತಿಗಳಲ್ಲಿ ಮೇಲ್ಕಂಡ ಅಂಶಗಳನ್ನು ಅನುಸರಿಸಲು ಅನುಕೂಲವಾಗುವಂತೆ ಜಿಲ್ಲಾ ಪಂಚಾಯತಿಯ ಉಪ ಕಾರ್ಯದರ್ಶಿಯವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಿ, ಆದೇಶಿಸುವಂತೆ ಸೂಚಿಸಿದೆ.

ಮೇಲಿನ ವಿಷಯವು ಅತೀ ಪ್ರಮುಖವಾದ ವಿಷಯವಾಗಿರುವುದರಿಂದ ತುರ್ತಾಗಿ ಕ್ರಮ ವಹಿಸಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಿದೆ.

(ಎಲ್.ಕೆ.ಅತೀಕ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:
1. ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಎಲ್ಲಾ ತಾಲ್ಲೂಕು ಪಂಚಾಯತಿಗಳ ಕಾರ್ಯನಿರ್ವಾಹಕ ಅಧಿಕಾರಿಗಳು. (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ)

3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

<u>ಪ್ರತಿಯನ್ನು ಮಾಹಿತಿಗಾಗಿ:</u>

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆರವರ ಆಪ್ತ ಕಾರ್ಯದರ್ಶಿ.
4. ನಿರ್ದೇಶಕರು (ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
5. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ರವರ ಆಪ್ತ ಸಹಾಯಕರು.
6. ವೆಬ್ ಸೈಟ್, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಕರ್ನಾಟಕ ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)ರವರು ಕೇಳಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂ.1640

**ಪೂರಕ ಟಿಪ್ಪಣಿ**

- ಕೊಡಗು ಜಿಲ್ಲೆಯ ಮಡಿಕೇರಿ, ಸೋಮವಾರಪೇಟೆ ಹಾಗೂ ಪೊನ್ನಂಪೇಟೆಯಲ್ಲಿ ತಾಲ್ಲೂಕು ಪಂಚಾಯತಿ ಕಛೇರಿಗಳಿದ್ದು, ಮಡಿಕೇರಿ ತಾಲ್ಲೂಕು ಪಂಚಾಯತಿ ಕಛೇರಿ ಕಟ್ಟಡವು ಹಳೆಯ ಕಟ್ಟಡವಾಗಿದ್ದು, ಮಳೆ ಹಾನಿಯಿಂದಾಗಿ ದುರಸ್ಥಿಯಾಗಿರುವುದರಿಂದ ಸಂಪೂರ್ಣ ಕಟ್ಟಡವನ್ನು ನೆಲಸಮಗೊಳಿಸಿ ಕಟ್ಟಡದ ಉನ್ನತೀಕರಣ ಕಾಮಗಾರಿ ಪ್ರಗತಿಯಲ್ಲಿರುವುದರಿಂದ, ಪ್ರಸ್ತುತ ಮಡಿಕೇರಿ ತಾಲ್ಲೂಕು ಪಂಚಾಯತಿಯು ಸಾಮರ್ಥ್ಯಸೌಧದಲ್ಲಿ ಹಾಗೂ ಸೋಮವಾರಪೇಟೆ ತಾಲ್ಲೂಕು ಪಂಚಾಯತಿ ಕಟ್ಟಡವು ಸ್ವಂತ ಕಟ್ಟಡದಲ್ಲಿ ಮತ್ತು ಹಿಂದಿನ ವಿರಾಜಪೇಟೆ ತಾಲ್ಲೂಕು ಪಂಚಾಯತಿ ಕಛೇರಿಯು ಪ್ರಸ್ತುತ ಪೊನ್ನಂಪೇಟೆಯಲ್ಲಿರುವುದರಿಂದ ಸದರಿ ಕಟ್ಟಡವನ್ನು ಪೊನ್ನಂಪೇಟೆ ತಾಲ್ಲೂಕು ಪಂಚಾಯತಿಯನ್ನಾಗಿ ಪರಿವರ್ತಿಸಿ ಕಾರ್ಯನಿರ್ವಹಿಸಲಾಗುತ್ತಿವೆ.
- ಮುಂದುವರೆದು, ಕುಶಾಲನಗರ ಮತ್ತು ವಿರಾಜಪೇಟೆ ತಾಲ್ಲೂಕುಗಳಿಗೆ ತಾಲ್ಲೂಕು ಪಂಚಾಯತಿ ಕಛೇರಿಗಳಿರುವುದಿಲ್ಲ. ಆದರೆ, ಕುಶಾಲನಗರ ತಾಲ್ಲೂಕು ಪಂಚಾಯತಿಯು ಮೂಲ ತಾಲ್ಲೂಕು ಪಂಚಾಯತಿಯಾದ ಸೋಮವಾರಪೇಟೆ ತಾಲ್ಲೂಕು ಪಂಚಾಯತಿಯಲ್ಲಿ ಹಾಗೂ ವಿರಾಜಪೇಟೆ ತಾಲ್ಲೂಕು ಪಂಚಾಯತಿಯು ಪೊನ್ನಂಪೇಟೆ ತಾಲ್ಲೂಕು ಪಂಚಾಯತಿಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿವೆ.
- ಹೊಸದಾಗಿ ರಚನೆಯಾಗಿರುವ ತಾಲ್ಲೂಕು ಪಂಚಾಯತಿಗಳನ್ನು ಕಾರ್ಯಚರಣೆಗೊಳಿಸುವಂತೆ ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ 215 ಜಿಪಸ 2018(ಪಿ-3), ದಿನಾಂಕ:01-01-2020ನ್ನು ಹೊರಡಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ). ಅದರಂತೆ, ಸದರಿ ತಾಲ್ಲೂಕು ಪಂಚಾಯತಿಗಳು ಸ್ವಾಯತ್ತ ಸಂಸ್ಥೆಗಳಾಗಿ ಕಾರ್ಯನಿರ್ವಹಿಸಲು ಅಗತ್ಯಕ್ರಮ ಕೈಗೊಳ್ಳಲು ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿರುತ್ತದೆ.
- ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪಂರಾ 418 ಜಿಪಸ 2021, ದಿನಾಂಕ:12-10-2021ರನ್ವಯ ಹೊಸದಾಗಿ ರಚನೆಯಾಗಿರುವ ತಾಲ್ಲೂಕು ಪಂಚಾಯತಿಗಳು ಕಾರ್ಯನಿರ್ವಹಿಸುತ್ತಿರುವ ಸ್ಥಳ, ಕಟ್ಟಡಕ್ಕೆ ಮಂಜೂರಾಗಿರುವ ಜಮೀನು/ನಿವೇಶನದ ಸಂಪೂರ್ಣ ಮಾಹಿತಿಯನ್ನು ಕ್ರೋಢೀಕರಿಸಿ ಸರ್ಕಾರಕ್ಕೆ ಒದಗಿಸುವಂತೆ ಕೊಡಗು ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸೂಚಿಸಲಾಗಿರುತ್ತದೆ. ಆದರೆ, ಇದುವರೆವಿಗೂ ಕೊಡಗು ಜಿಲ್ಲಾ ಪಂಚಾಯತಿಯಿಂದ ಯಾವುದೇ ಮಾಹಿತಿಯು ಸರ್ಕಾರದಲ್ಲಿ ಸ್ವೀಕೃತಗೊಂಡಿರುವುದಿಲ್ಲ.
- ಕೊಡಗು ಜಿಲ್ಲಾ ಪಂಚಾಯತಿಯು 104 ಗ್ರಾಮ ಪಂಚಾಯಿತಿಗಳನ್ನೊಳಗೊಂಡಂತೆ ಜೆ.ಜೆ.ಎಂ. ಯೋಜನೆಯಡಿಯಲ್ಲಿ ಬ್ಯಾಚ್-1 ರಲ್ಲಿ 188 ಜನ ವಸತಿ ಪ್ರದೇಶ, ಬ್ಯಾಚ್-2 ರಲ್ಲಿ 135 ಜನ ವಸತಿ ಪ್ರದೇಶ ಹಾಗೂ ಬ್ಯಾಚ್-3 ರಲ್ಲಿ 138 ಜನ ವಸತಿ ಪ್ರದೇಶಗಳಿಗೆ ಎಲ್ಲಾ ಗ್ರಾಮೀಣ ಮನೆಗಳಿಗೆ

ಕುಡಿಯುವ ನೀರಿನ ಸಂಪರ್ಕವನ್ನು ನೀಡಲು ಡಿ.ಪಿ.ಆರ್ ತಯಾರಿಸಿ ಒದಗಿಸಲು ಕ್ರಮ ವಹಿಸಲಾಗುತ್ತಿದೆ. ಕೊಡಗು ಜಿಲ್ಲೆಯಲ್ಲಿ ಒಟ್ಟು **1,37,793** ಗ್ರಾಮೀಣ ಮನೆಗಳಿದ್ದು, ಈವರೆಗೂ **78,488** ಮನೆಗಳಿಗೆ ನೀರಿನ ಸಂಪರ್ಕ ಒದಗಿಸಲಾಗಿದ್ದು, ಉಳಿದ ಮನೆಗಳಿಗೆ ಬ್ಯಾಚ್-3ರಲ್ಲಿ ನೀರು ಸಂಪರ್ಕ ಒದಗಿಸಲು ಕ್ರಮ ವಹಿಸಲಾಗುತ್ತಿದೆ.

- ಬಾಕಿ ಇರುವ **59305** ಮನೆಗಳಿಗೆ ಬ್ಯಾಚ್-2 ಮತ್ತು 3 ರಲ್ಲಿ ನಳ ನೀರು ಸಂಪರ್ಕ ಒದಗಿಸಲು ಕ್ರಮ ವಹಿಸಲಾಗುತ್ತಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಸದರಿ ಕಾಮಗಾರಿಗಳನ್ನು ಮಾರ್ಚ್-2023 ರೊಳಗೆ ಗುರಿ ಸಾಧಿಸಲು ಯೋಜನೆಯನ್ನು ರೂಪಿಸಲಾಗಿದೆ.